


# ಉಳಿದಾವ ಸಾವಿತ್ರಮ್ಮನ ಸಾವಿರದ ಹಾಡು...

**ಅಪ್ಪನ ಪದಗಳಿಗೆ ಕಿವಿಯಾಗುತ್ತಲೇ ಹಾಡುವುದನ್ನು ಕಲಿತ ಸಾವಿತ್ರಮ್ಮನವರದ್ದು ಅಪ್ಪಟ ಜನಪದ ಕಂಠ. ಹಸೆಹಾಡು, ಸೋಬಾನೆ, ದಾಸಯ್ಯನ ಹಾಡುಗಳು, ತತ್ತ್ವಪದಗಳ ಅಂತಃಸತ್ವವನ್ನು ಹಾಡಿನ ಮೂಲಕ ತೆರೆದಿಡುವ ಕಲಾವಿದೆ.**

**■ ಜಿ.ವಿ. ಆನಂದಮೂರ್ತಿ**

ನೂರಾರು ಹಸೆಹಾಡುಗಳು, ಸೋಬಾನೆ ಹಾಡುಗಳು, ಆರತಿ ಹಾಡುಗಳು, ದಾಸಯ್ಯನ ಹಾಡುಗಳು, ತತ್ತ್ವಪದಗಳನ್ನು ತನ್ಮಯತೆಯಿಂದ ಹಾಡುವ ಸಾವಿತ್ರಮ್ಮ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೆಳವಾಡಿ ಗೊಲ್ಲರಹಟ್ಟಿಯವರು. ಹದಿನೈದನೇ ವಯಸ್ಸಿಗೆ ಜಯರಾಮಯ್ಯ ಅವರನ್ನು ಮದುವೆಯಾಗಿ ಗುಬ್ಬಿ ತಾಲ್ಲೂಕು ಯಕ್ಕಲುಕಟ್ಟೆ ಗೊಲ್ಲರಹಟ್ಟಿಗೆ ಬಂದವರು.

ಬಸವನಹಟ್ಟಿಯಿಂದ ಕೂಗಳತೆಯಲ್ಲಿರುವ ತಮ್ಮ ಹೊಲದಲ್ಲಿ ಕಟ್ಟಿಕೊಂಡಿರುವ ಗುಡಿಸಲಿನಲ್ಲಿ ಈಗ ವಾಸವಿದ್ದಾರೆ. ಕೂಡು ದಾರಿಯಿಂದ ಒಂದೂವರೆ ಫರ್ಲಾಂಗ್ ದೂರವಿದ್ದ ಅವರ ಹೊಲಕ್ಕೆ ಹೋದಾಗ, ತೆಂಗಿನಸೋಗೆ ಹೊದಿಸಿದ ಗುಡಿಸಲಿನಲ್ಲಿ ಅವರು ಮೊರದಲ್ಲಿ ಅಲಸಂದೆ ಕಾಳನ್ನು ಕೇರುತ್ತಿದ್ದರು. ಕಾಲಿಗೆ ನೀರು ಹಾಕಿಕೊಂಡು ಗುಡಿಸಲಿನ ಒಳಗೆ ಕಾಲಿಟ್ಟಾಗ ಸಗಣಿ ಬಗ್ಗಡದಿಂದ ಸಾರಿಸಿದ ನೆಲ ಕಮ್ಮನೆ ವಾಸನೆ ಹೊಡೆಯುತ್ತಿತ್ತು. ಗುಡಿಸಲಿನ ಮೂಡ್ಲು ದಿಕ್ಕಿಗೆ ಮದಗದ ಬೆಟ್ಟದ ಸಾಲು, ಪಡುವಲು ದಿಕ್ಕಿಗೆ ಮಾವಿನತೋಪು, ತೆಂಕಲುದಿಕ್ಕಿಗೆ ‘ಮಲ್ಟಿ’ (ಕಿರುಗುಡ್ಡ), ಬಡಗಲು ದಿಕ್ಕಿಗೆ ಮರಡಿಗುಡ್ಡ ಮತ್ತು ಪುರಸಕ್ಕನ ಕೆರೆಯಿಂದ ಬೀಸಿಬರುವ ಗಾಳಿ. ಎಲ್ಲವೂ ಬಹುಕಾಲ ಕಣ್ಣಲ್ಲಿ ಉಳಿಯುವಂತೆ ಹಚ್ಚಹಸುರಾಗಿತ್ತು. ನಾವು ತಿಳಿದಂತೆ ಈ ಸೀಮೆಯೆಲ್ಲಾ ಜುಂಜಪ್ಪ ತನ್ನ ಆವು–ಗೋವುಗಳೊಂದಿಗೆ ಓಡಾಡಿದ ನೆಲ.

ಸಾವಿತ್ರಮ್ಮನ ತಂದೆ ಸಣ್ಣತಿಮ್ಮಯ್ಯ, ತಾಯಿ ಕ್ಯಾತಮ್ಮ. ಇವರು ಕರಡೇರ ಗೊಲ್ಲರು. ಕಾಳು ಕೇರುತ್ತಿದ್ದ ಸಾವಿತ್ರಮ್ಮನವರನ್ನು ಹಾಗೆಯೇ ಮಾತಿಗೆ ಎಳೆಯುತ್ತಾ, ಅವರ ಹಾಡುಗಾರಿಕೆಯ ಮೂಲವನ್ನು ತಿಳಿಯಲು ಮುಂದಾದೆ.

“ನಮ್ಮ ಅಪ್ಪ ಅಮ್ಮನಿಗೆ ಒಟ್ಟು ಏಳು ಜನ ಮಕ್ಕಳು. ಅದರಲ್ಲಿ ಆರು ಜನ ಹೆಣ್ಣುಮಕ್ಕಳು, ಕೊನೆಯವನು ತಮ್ಮ. ಅದಕ್ಕೆ ನಮ್ಮನ್ನೆಲ್ಲ ಅಪ್ಪ ಬೋ ಅಕ್ಕರದಿಂದ ಸಾಕಿದ. ದೇವರಂತಿದ್ದ ನಮ್ಮ ಅಪ್ಪನನ್ನು ಮನೆದೇವರು ‘ಹೊನ್ನಜ್ಜಿ ಸಿರಿಯಪ್ಪ’ನೇ ನಮಗೆ ಕೊಟ್ಟ ವರ ಅಂದುಕೊಂಡಿದ್ದೇನೆ. ನನಗೆ ನಮ್ಮ ಅಪ್ಪನನ್ನು ನೋಡಿದ್ರೆ ಆಕಾಸಾನೆ ಕೈಗೆ ಸಿಕ್ಕಷ್ಟು ಸಂತೋಷ ಆಗೋದು! ಅಂಥ ಅಪ್ಪನನ್ನು ನಾನು ಇನ್ನು ನೋಡಲಾರೆ!” ಎಂದು ಕಣ್ಣೀರಾದರು ಸಾವಿತ್ರಮ್ಮ.

“ನಮ್ಮ ಅಪ್ಪ ತನ್ನ ತಂಗಿಯರು (ಸೋದರತ್ತೆಯರು) ಮತ್ತು ಮಕ್ಕಳಿಗಾಗಿ ಬದುಕನ್ನೇ ‘ಜನಿಗೆ’ ಹಾಲಿನಂತೆ ಮೀಸಲಾಗಿಟ್ಟ. ತಂಗಿಯರು ತೌರುಮನೆಗೆ ಬಂದಾಗಲೆಲ್ಲಾ ಅವರನ್ನು ಸೆಂದಾಗಿ ನೋಡಿಕೊಳ್ಳೋನು! ಅಂಗೈಯಾಗಿ ಉಂಡಿದ್ದು, ಮುಂಗೈಮೇಲೆ ಹರಿಯುವಂತೆ ನೋಡಿಕೊಳ್ಳುತ್ತಿದ್ದ” ಎನ್ನುತ್ತಾ, ತಮಗೆ ಹಾಡುವ ಕಲೆ ಒಲಿದುಬಂದ ಬಗೆಯನ್ನು ತೆರೆದಿಡುತ್ತಾ ಹೋದರು.

“ನಾನು ಮೂರನೇ ಕಳಾಸಿನವರೆಗೆ ಸ್ಕೂಲಿಗೆ ಸಿಲೇಟು ಬಳಪ ಹಿಡಿದು ಹೋಗಿದ್ದೆ. ಆದರೆ ನನ್ನ ಅಜ್ಜಿ ಎಮ್ಮೆ, ಹಸ, ಕುರಿ ಕಾಯಲು ಮಲ್ಟಿಗೆ ಕರೆದುಕೊಂಡು ಹೋಗುತ್ತಿತ್ತು. ನನಗೂ ಸ್ಕೂಲಿಗೆ ಹೋಗೋದಕ್ಕಿಂತ ನಮ್ಮ ಅಜ್ಜಿ ಜೊತೆಗೇ ಹೋಗೋದು ಇಷ್ಟವಾಗುತ್ತಿತ್ತು. ನಾನು ಪದ ಹಾಡೋದನ್ನು ಕಲಿತ್ತಿದ್ದು ನಮ್ಮ ಅಪ್ಪನಿಂದ. ಆಗ ನಮಗೆ ಒಸಿ ಬಡತನ ಇತ್ತು. ನಮ್ಮವ್ವ ಕ್ಯಾತಮ್ಮ ನುಗ್ಗೆ ಸೊಪ್ಪು ತಂದು, ಅದನ್ನೇ ಬೇಯಿಸಿ ನಮಗೆ ಕೊಡೋಳು. ನಾವು ಏಳು ಜನ ಮಕ್ಕಳು ಅಳುತ್ತಿದ್ದಾಗ ಅಪ್ಪ ನಮ್ಮನ್ನೆಲ್ಲಾ ಸುತ್ತಲೂ ಕುಳ್ಳಿರಿಸಿಕೊಂಡು ಜುಂಜಪ್ಪನ ಹಾಡು, ಕರಡಿಬುಳ್ಳಪ್ಪನ ಹಾಡು, ಗೊಲ್ಲರ ಕತೆಗಳನ್ನು ಹೇಳುತ್ತಾ ನಮಗೆ ತಿನ್ನಿಸುತ್ತಿದ್ದ. ನಮ್ಮ ಹಟ್ಟಿಯಲ್ಲಿ ಅಪ್ಪ ಹಾಡುವಂತೆ ಯಾರೂ ಅಷ್ಟು ಇಂಪಾಗಿ ಹಾಡುತ್ತಿರಲಿಲ್ಲ! ಹೀಗಾಗಿ ನಾನು ನಮ್ಮ ಅಪ್ಪನ ಪದಗಳಿಗೆ ಕಿವಿಯಾದೆ. ನನಗೆ ಗೊತ್ತಾಗದಿದ್ದನ್ನು ಇನ್ನೊಂದ ಸಲ ಹಾಡಪ್ಪ ಅಂತ ಕೇಳುತ್ತಿದ್ದೆ. ನಮ್ಮ ಅಪ್ಪ ಬ್ಯಾಸರಿಕೆ ಇಲ್ಲದೆ ಹಾಡುತ್ತಿದ್ದ. ಹೀಗೆ ನಾನು